
ನಸುನಗು, ಸದಾ ಶುಭ್ರವಾದ ಒಂದು ತುಂಡು ಬಿಳಿಯ ಪಂಚೆ, ಒಂದು ಬಿಳಿಯ ಜುಬ್ಬ ಧರಿಸುತ್ತಿದ್ದ ಮುಕುಂದಪ್ಪನವರನ್ನು ಇಡೀ ಕೇರಿ ಇನ್ನಿಲ್ಲದಂತೆ ಗೌರವಿಸುತ್ತಿತ್ತು. ಅವರು ಹೊಸಿಲು ದಾಟಿದರೆ, ಕೇರಿಯಲ್ಲಿ ಎದುರಾಗುವವರೆಲ್ಲ ಕೈಜೋಡಿಸಿ ಮುಗಿದು 'ನಮಸ್ಕಾರ ಮುಕುಂದಪ್ಪನವರೆ' ಎಂದು ಹೇಳಿ ಮುಂದೆ ಹೋಗುತ್ತಿದ್ದರು.

ಮಧ್ಯಾಹ್ನದ ನಂತರ ಮನೆಗೆ ಬಂದು ಹಡಪವನ್ನು ಗೂಡಿನಲ್ಲಿಟ್ಟು ಸ್ನಾನ ಮುಗಿಸಿ, ಮನೆಯಲ್ಲಿ ಇದ್ದುದ್ದನ್ನು ಊಟ ಮಾಡಿ, ಪಕ್ಕದಲ್ಲಿಯೇ ಇದ್ದ ಗುಬ್ಬಿಯಪ್ಪನ ದೇವಾಲಯಕ್ಕೆ ತೆರಳುತ್ತಿದ್ದರು. ಗುಬ್ಬಿಯಪ್ಪನ ದೈವಿಕ ಆವರಣದಲ್ಲಿಯೇ ಪರವಶತೆಯ ಭಾವದಿಂದ ದಿನದ ಉಳಿದ ಭಾಗವನ್ನು ಕಳೆಯುತ್ತಿದ್ದರು. ಒಂದು ವೇಳೆ ದೇವರ ತಲೆಯ ಮೇಲೆ ಹೂ ತಪ್ಪಿದರೂ ತಪ್ಪಬಹುದು! ಆದರೆ ಮುಕುಂದಪ್ಪನವರ ಈ ವೇಳಾಪಟ್ಟಿಯಲ್ಲಿ ಮಾತ್ರ ಯಾವುದೇ ಬದಲಾವಣೆಯಾಗುತ್ತಿರಲಿಲ್ಲ! ಅಷ್ಟರ ಮಟ್ಟಿಗೆ ವ್ರತವಾದಿಗಳು ಅವರು. 'ಪ್ರಾಮಾಣಿಕತೆ ಮತ್ತು ಸರಳತೆ' ಎನ್ನುವುದು ದೇವರು ನೀಡಿದ ಉಡುಗೊರೆ ಎಂದೇ ಅವರು ಅಚಲವಾಗಿ ನಂಬಿದ್ದರು. ಅದೇ ರೀತಿಯಾಗಿ ತಮ್ಮ ಮಕ್ಕಳನ್ನೂ ಬೆಳೆಸಿದ್ದರು.

ಮುಕುಂದಪ್ಪನವರ ಮಕ್ಕಳ ಪೈಕಿ ಹಿರಿಯರಾದ ನರಸಿಂಹಮೂರ್ತಿ ಮತ್ತು ನರಸಪ್ಪ ಆ ಕಾಲಕ್ಕೆ ಪ್ರಖ್ಯಾತ ನಾಗಸ್ವರ ಕಲಾವಿದರಾಗಿದ್ದರು. ಮತ್ತೊಬ್ಬ ಮಗ ವೆಂಕಟಪತಪ್ಪ ಡೋಲು ಕಲಾವಿದರು. ನರಸಪ್ಪ ಆಲಾಪನೆಯಲ್ಲಿ ಸಿದ್ಧಹಸ್ತರು. ನರಸಿಂಹಮೂರ್ತಿ ಕೋಮಲ ಸ್ವರಗಳು ಸಂಭ್ರಮಿಸುತ್ತಾ ಉಕ್ಕುವಂತೆ ನಾಗಸ್ವರ ನುಡಿಸುತ್ತಿದ್ದರು. ನಾಗಸ್ವರ ನುಡಿಸುವುದರಲ್ಲಿ ಈ ಸಹೋದರರು ಎಂತಹ ಶಿಖರಕ್ಕೆ ತಲುಪುತ್ತಿದ್ದರೆಂದರೆ, ಇವರ ಸುತ್ತಲೂ ಇದ್ದ ಶಬ್ದಗಳ ಲೌಕಿಕ ಪ್ರಪಂಚ ಕರಗಿಹೋಗಿ, ಎಲ್ಲವೂ ಸಂಗೀತದ ರಾಗವಾಗಿ ಮಳೆಯ ಮೋಡಗಳಂತೆ ಕವಿದುಕೊಳ್ಳುತ್ತಿದ್ದವು. ಗುಬ್ಬಿ ಮತ್ತು ಅದರ ಸುತ್ತಮುತ್ತಲ ಹಳ್ಳಿಗಳಲ್ಲಿ ನಡೆಯುವ ಮದುವೆ ಮತ್ತು ದೇವರ ಉತ್ಸವಗಳಲ್ಲಿ ಇವರ ತಂಡ ಮುಂಚೂಣಿಯಲ್ಲಿ ಇರುತ್ತಿತ್ತು. ಸಂಗೀತದ ಬಗ್ಗೆ ಅಭಿರುಚಿವುಳ್ಳ ಯಾವುದೇ ವ್ಯಕ್ತಿ ಇವರ ನಾಗಸ್ವರ ವಾದನವನ್ನು ಕೇಳಿಸಿಕೊಳ್ಳುವುದರಿಂದ ವಂಚಿತನಾಗುತ್ತಿರಲಿಲ್ಲ! ಕೃತಕತೆಯ ಸೋಂಕಿಲ್ಲದ ಅಪ್ಪಟ ಸಂಗೀತಕ್ಕಾಗಿಯೇ ಅರ್ಪಿಸಿಕೊಂಡಿದ್ದವರ ಹೃದಯದಿಂದ ಹೊರಹೊಮ್ಮುವ ಸಂಗೀತ ಅದಾಗಿತ್ತು. ನಾಡಿನ ಪ್ರಖ್ಯಾತ ಕಲಾವಿದರಾದ ಗುಬ್ಬಿ ವೀರಣ್ಣನವರು ತಮ್ಮ ಕುಟುಂಬದಲ್ಲಿ ನಡೆದ ಒಂದು ಮದುವೆಗೆ ನರಸಿಂಹಮೂರ್ತಿ ಮತ್ತು ಸಹೋದರರನ್ನೇ ನಾಗಸ್ವರ ನುಡಿಸಲು ಕರೆಸಿದ್ದರು. ಆ ಅದ್ದೂರಿ ಮದುವೆಗೆ ಬಂದಿದ್ದ ಆ ಕಾಲದ ಗಣ್ಯರೆಲ್ಲಾ ನರಸಿಂಹಮೂರ್ತಿ ಮತ್ತು ನರಸಪ್ಪನವರ ಶಬ್ದಾತೀತ ಸೊಬಗಿನಂತಿದ್ದ ಸಂಗೀತದ ಕಲೆಗೆ ಮನಸೋತು ಮೆಚ್ಚಿಗೆ ಸೂಚಿಸಿದರು. ದುರದೃಷ್ಟವಶಾತ್ ಇವರ ಪ್ರತಿಭೆಯನ್ನು ಎಲ್ಲೆಡೆ ಬೆಳಗಿಸುವ ಸಾಮರ್ಥ್ಯ ಇವರು ಹುಟ್ಟಿಬಂದ ಪರಿಸರಕ್ಕಿರಲಿಲ್ಲ!



ಮದುವೆ ಶಾಸ್ತ್ರ ಮುಗಿದಮೇಲೆ, ಸ್ವತಃ ವೀರಣ್ಣನವರೇ ನರಸಿಂಹಮೂರ್ತಿ ಅವರ ಹತ್ತಿರ ಬಂದು, ತಟ್ಟೆಯಲ್ಲಿ ಫಲ ತಾಂಬೂಲದೊಡನೆ 300 ರೂಪಾಯಿಗಳನ್ನು ಇಟ್ಟು, 'ನರಸಿಂಹಮೂರ್ತಿ ನಿನ್ನಲ್ಲಿರುವ ಕಲೆ ದೊಡ್ಡದು. ಅದಕ್ಕೆ ಬೆಲೆ ಕಟ್ಟಲಾಗದು! ನಿನ್ನಂತಹ ಕಲಾವಿದನನ್ನು ಗೌರವಿಸುವುದು